**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 1980/24** **ಪಿಡಬ್ಲ್ಯೂಃ** **13**

**ಸಿಡಬ್ಲ್ಯೂಃ** **21**

ಸಾಕ್ಷಿದಾರರ ಹೆಸರು ಃ ಆನಂದ ನರೇಂದ್ರ

ತಂದೆ / ಗಂಡನ ಹೆಸರು ಃ ಬಸವಣ್ಣೆಪ್ಪ

ವಯಸ್ಸು ಃ 55 ವರ್ಷ

ಉದ್ಯೋಗ ಃ ಎ ಎಸ್ ಐ ಪೂರ್ವ ಸಂಚಾರಿ ಪೋಲಿಸ ಠಾಣೆ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2024 ರಿಂದ ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 09-01-2024 ರಂದು ಚಾಸಾ 25 ರವರು ನನಗೆ ಸದರಿ ಪ್ರಕರಣದಲ್ಲಿ ಆರೋಪಿ ರವಿಕುಮಾರ ಡಂಬಳ ಕೆ ಎ 05 ಎಂ ಎಫ 6641 ಗಾಡಿಯನ್ನು ಪತ್ತೆ ಮಾಡಲು ಜ್ಞಾಪಕ ಪತ್ರವನ್ನು ನೀಡಿದ್ದರು. ನಾನು ಸದರಿ ದಿನದಂದು ಎಂ ಸಿಸಿ ಟಿ ಎನ ಎಸ್ ಸಾಫ್ಟವೇರ ನಲ್ಲಿ ಸದರಿ ವಾಹನದ ನಂಬರ ಹಾಕಿದಾಗ ವಾಹನದ ಮಾಲೀಕರ ವಿಳಾಸ ಪತ್ತೆಯಾಯಿತು. ನಾನು ಅದೇ ದಿವಸ ಆ ವಿಳಾಸಕ್ಕೆ ಹೋದಾಗ ಅವರು ಕೆಲಸ ನಿಮಿತ್ತ ಗಾಡಿ ಸಮೇತ ಹೊರಗಡೆ ಹೋಗಿದ್ದರು. ನಾಳೆ ಬರುತ್ತವೇ ಅಂತಾ ಹೇಳಿದ್ದರು. ಮರುದಿನ ದಿಃ 10-01-2024 ರಂದು ಪುನಃ ಅದೇ ವಿಳಾಸಕ್ಕೆ ಹೋದೆವು. ನಾನು ಪ್ರಕರಣದ ವಿಷಯವನ್ನು ತಿಳಿಸಿ ಠಾಣೆಗೆ ಬರಬೇಕೆಂದು ಹೇಳಿದವು ಅದಕ್ಕೆ ಅವರು ಒಪ್ಪಿಕೊಂಡರು ಗಾಡಿ ಮತ್ತು ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ 25 ರವರ ಮುಂದೆ ಹಾಜರುಪಡಿಸಿ ಈ ಕುರಿತು ವರದಿ ನೀಡಿರುತ್ತೇನೆ. ಜ್ಞಾಪಕ ಪತ್ರವನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ 26 ಎ ಗುರುತಿಸಲಾಯಿತು. ಸಾಕ್ಷಿ ವರದಿಯನ್ನು ನಿಪಿ 27 ಎಂದು, ಸಾಕ್ಷಿಯ ಸಹಿಯನ್ನು ನಿಪಿ 27 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ಪಿ   ವಕೀಲರಿಂದಃ**

ದಿಃ 09-01-2024 ರಂದು ಆರೋಪಿ ಮತ್ತು ಈ ಪ್ರಕರಣದಲ್ಲಿರುವ ವಾಹನವನ್ನು ಪತ್ತೆ ಮಾಡಲು ಚಾಸಾ 25 ರವರು ಮೆ ಮೋ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜ್ಞಾಪಕ ಪತ್ರದಲ್ಲಿ ಸಮಯ ನಮೂದು ಮಾಡಿಲ್ಲ ಎಂದರೆ ಸರಿ. ಸಾಫ್ಟವೇರ ಬಗ್ಗೆ ತರಬೇತಿ ಕೊಟ್ಟಿಲ್ಲ.  ಎಂ ಸಿ ಸಿ ಟಿ ಎನ ಎಸ್  ಸಾಫ್ಟವೇರನಲ್ಲಿ ಸದರಿ ವಹಾನದ ನಂಬರ ಹಾಕಿದಾಗ ಮಾಲೀಕರು ಪತ್ತೆಯಾದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಸಾಫ್ಟವೇರನಲ್ಲಿ ನಂಬರ ಹಾಕಿದ್ದು ತನಿಖಾಧಿಕಾರಿಗೆ ಗೊತ್ತು. ಸುಂದರಟೌನ  ಎಕ್ಸಟೆನಷನ್ ಏರಿಯಾ ಗೋಪನಕೊಪ್ಪ ಎಂದು ಬಂತು. ಆರೋಪಿಯ ವಿಳಾಸ ಗಟ್ಟಿರೆಡ್ಡಿಹಾಳ ಕೊಪ್ಪಳ ವಿಳಾಸದಲ್ಲಿ ಎಂದರೆ ಸರಿಯಲ್ಲ.  ನಾನು  ಎಷ್ಟು ಗಂಟೆಗೆ ವಿಳಾಸಕ್ಕೆ ಹೋದೆನು ಎಂದು ಸಮಯ ನಮೂದು ಇಲ್ಲ.  ಸ್ವಂತ ಮನೆಯೋ ಅಥವಾ ಬಾಡಿಗೆ ಮನೆಯೋ ಗೊತ್ತಿಲ್ಲ. ಕೆಳಗಿನ ಮಹಡಿಯಲ್ಲಿ ಯಾರು ಇದ್ದಾರೆ ನನಗೆ ಗೊತ್ತಿಲ್ಲ.  ಮನೆಯ ಮಾಲೀಕರ ವಿಳಾಸ ಕೇಳಿಲ್ಲ. ಮರುದಿವಸ ಆರೋಪಿಯ ವಿಳಾಸಕ್ಕೆ  ಹೋದ ಬಗ್ಗೆ ಠಾಣೆಯಲ್ಲಿ ನಮೂದು ಮಾಡಿಲ್ಲ.  ಆರೋಪಿಯನ್ನು ಮತ್ತು ವಾಹನವನ್ನು ಹಾಜರುಪಡಿಸಿ ವರದಿ ನೀಡಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಮ್ಮ ಮೇಲಾಧಿಕಾರಿಗಳ ಮಾತನ್ನು ಜ್ಞಾಪಕ ಪತ್ರವನ್ನು ಹಾಜರುಪಡಿಸಿದ್ದೇನೆ ಎಂದರೆಸರಿಯಲ್ಲ. ನಾನು ಯಾವತ್ತೂ ಆರೋಪಿಯ ವಿಳಾಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.